ಮೂಲ ದಾವಾ ನಂಃ 20/2023

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **15-07-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಬಿ.ಬಿ ವಕೀಲರಿಂದಃ**

ಈ ದಾವೆ ಹೂಡಲಿಕ್ಕೆ ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ನಮ್ಮ ತಂದೆ ಸುಬ್ಬು ಈರಯ್ಯ ನಾಯ್ಕರವರಿಗೆ ಒಟ್ಟು 4 ಜನ ಸಹೋದರರಿದ್ದಾರೆ. ನಮ್ಮ ತಂದೆಯ ಎಲ್ಲ ಸಹೋದರರು ತೀರಿಕೊಂಡಿದ್ದಾರೆ. ದಾವಾ ಜಂಜ್ರಾ ನಂಬರ್ 1 ನೇ ಸ್ಥಳವು ನಮ್ಮ ತಂದೆಯವರಿಗೆ ಮಂಜೂರಿ ನಾತೆಯಿಂದ ಬಂದಿದೆ. ದಾವಾ ಜಂಜ್ರಾ ನಂಬರ್ 2 ನೇ ಸ್ಥಳವು ನಮ್ಮ ತಂದೆಯವರಿಗೆ ಯಾವ ರೀತಿ ಬಂದಿದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಜಂಜ್ರಾ ನಂಬರ್ 2 ನೇ ಸ್ಥಳವು ನನ್ನ ತಂದೆ, ಹಾಗೂ ಅವರ ಸಹೋದರರಾದ ನಾಗಪ್ಪ ಈರಯ್ಯ ನಾಯ್ಕ , ನಾರಾಯಣ ಈರಯ್ಯ ನಾಯ್ಕ , ಸಣ್ತಮ್ಮ ಈರಯ್ಯ ನಾಯ್ಕ , ಹಾಗೂ ಗಣಪತಿ ಈರಯ್ಯ ನಾಯ್ಕರವರಿಗೆ ಸಾಮೂಹಿಕವಾಗಿ ಮಂಜೂರಿಯಾಗಿದೆ ಎಂದರೆ ಸರಿ.

ದಾವಾ ಜಂಜ್ರಾ ನಂಬರ್ 2 ನೇ ಸ್ಥಳದಲ್ಲಿ ನನ್ನ ತಂದೆಯವರಿಗೆ ಬರುವ ಹಕ್ಕಿನಲ್ಲಿ ವಾದಿ ಪ್ರತಿವಾದಿಯರಿಗೆ 1/6 ಅಂಶ ಹಕ್ಕಿದೆ ಎಂದರೆ ಸರಿ. ದಾವಾ ಜಂಜ್ರಾ ನಂಬರ್ 2 ನೇ ಸ್ಥಳದಲ್ಲಿ ನಮ್ಮ ಕುಟುಂಬಕ್ಕೆ 1/6 ಅಂಶ ಹಕ್ಕಿದೆ ಎಂದರೆ ಸರಿ.

ನಾಗಪ್ಪ , ನಾರಾಯಣ , ಸಣ್ತಮ್ಮ , ಹಾಗೂ ಗಣಪತಿರವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಸೇರಿಸಿಲ್ಲ ಎಂದಾಗ , ಸಾಕ್ಷಿಯು ಅವರದ್ದು ಪ್ರತ್ಯೇಕವಿದ್ದು ಈ ದಾವೆಗೆ ಅವರು ಅವಶ್ಯಕತೆ ಇರುವುದಿಲ್ಲ ಎಂಬುದಾಗಿ ನುಡದಿದ್ದಾರೆ. ಮುಂದುವರೆದು , ನಮಗೆ ಸಂಬಂಧಪಟ್ಟಂತಹ ಪಕ್ಷಗಾರರನ್ನು ಸದರಿ ದಾವೆಯಲ್ಲಿ ಸೇರಿಸಿದ್ದೇವೆ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ. ನಮ್ಮ ತಂದೆಯ ಸಹೋದರರ ನಡುವೆ ಇನ್ನುವರೆಗೂ ಸರಸ-ನಿರಸ ವಾಂಟಣಿ ಆಗಿದ್ದು ಇರುದಿಲ್ಲ. ನಮ್ಮ ತಂದೆಯ ಸಹೋದರರ ವಾರಸುದಾರರು ನಮ್ಮ ಊರಿನಲ್ಲಿ ವಾಸವಿದ್ದಾರೆ.

ದಾವಾ ಜಂಜ್ರಾ ನಂಬರ್ 2 ನೇ ಸ್ಥಳದ ಪೂರ್ತಿ ಕ್ಷೇತ್ರದಲ್ಲಿ ವಾದಿ ಪ್ರತಿವಾದಿಯರಿಗೆ 1/6 ಅಂಶ ಹಕ್ಕಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಮ್ಮ ತಂದೆಯ ಸಹೋದರರ ವಾರಿಸುದಾರರನ್ನು ಸೇರಿಸದೇ ಈ ದಾವೆಯು ನಡೆಯುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.